ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಸಭಾಧ್ಯಕ್ಷರೇ, ಈ ವಿಷಯವನ್ನು ತನ್ನ ಗೌರವದ ಪ್ರಶ್ನೆಯನ್ನಾಗಿ ಆಡಳಿತ ಪಕ್ಷವು ತೆಗೆದುಕೊಳ್ಳುವುದು ಬೇಡ. ಎರಡೂ ಕಡೆಯ ಶಾಸಕರುಗಳಿಗೆ ಪೋಲೀಸರಿಂದ ಸಾಕಷ್ಟು ಕಿರುಕುಳ ಆಗಿರುತ್ತಾ ಇದೆ. ಆಡಳಿತ ಪಕ್ಷದ ಶಾಸಕರಿಗೆ ಈಗ ಅವಮಾನವಾಗಿದೆ. ವಿರೋಧಪಕ್ಷದ ನಾಯಕರು ಏನು ಹೇಳಿದ್ದಾರೆ ಅದು ನ್ಯಾಯಬದ್ಧವಾಗಿದೆ. ಆದುದರಿಂದ ಒಂದು ಅರ್ಧಘಂಟೆಯ ಕಾಲದವರೆಗೆ ಸಭೆಯನ್ನು ಮುಂದಕ್ಕೆ ಹಾಕಿ, ವಿರೋಧಪಕ್ಷದ ನಾಯಕರ ಜೊತೆಗೆ ಚರ್ಚೆ ಮಾಡಿ. ಸಂಬಂಧಪಟ್ಟ ಅಧಿಕಾರಿಯನ್ನು ಪೆಂಡಿಂಗ್ ಎನ್‌ಕ್ವೈರಿ ಸಸ್ಪೆನ್‌ನಲ್ಲಿ ಇಡಲಿ. ಇದನ್ನು ಗೌರವದ ಪ್ರಶ್ನೆ ಎಂದು ತೆಗೆದುಕೊಳ್ಳದೇ. ಮಾನ್ಯ ಅಧ್ಯಕ್ಷರು ಸಮಾಲೋಚನೆ ಮಾಡಿ ಸಮಸ್ಯೆಯನ್ನು ಬಗೆಹರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

(ಧರಣಿ ಕುಳಿತುಕೊಂಡಿದ್ದ ಸದಸ್ಯರುಗಳವರು—ನಮಗೆ ರಕ್ಷಣೆ ಕೊಡಿ—ಎಂದು ಘೋಷಣೆ ಕೂಗುತ್ತಿದ್ದರು)

ಅಧ್ಯಕ್ಷರು.—ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಸದಸ್ಯರು ದಯಮಾಡಿ ತಮ್ಮ ತಮ್ಮ ಜಾಗಕ್ಕೆ ಬಂದು ಕುಳಿತುಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ತಾವು ಬಂದು ಕುಳಿತುಕೊಂಡ ಮೇಲೆ ನಾನು ವಿಚಾರವನ್ನು ಹೇಳುತ್ತೇನೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ಸದನದ ನಾಯಕರು ಈ ಪ್ರಶ್ನೆಯನ್ನು ಬಗೆಹರಿಸಬೇಕು.

ಅಧ್ಯಕ್ಷರು.—ದಯಮಾಡಿ ತಾವೆಲ್ಲರೂ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಬೇಕು ಮಾನ್ಯ ಸದಸ್ಯರು ತಮ್ಮ ಜಾಗಕ್ಕೆ ಹಿಂದಿರುಗಿ ಬಂದು ಕುಳಿತುಕೊಳ್ಳಬೇಕು.

(ಗೊಂದಲ)

(ಧರಣಿ ಕುಳಿತ ಕೊಂಡ ಸದಸ್ಯರುಗಳು ಘೋಷಣೆಗಳನ್ನು ಕೂಗುತ್ತಿದ್ದರು)

ಶ್ರೀ ಬಿ.ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಒಂದೇ ಅಭಿಪ್ರಾಯಕ್ಕೆ ಬಂದಿದ್ದಾರೆ. ತಪ್ಪಿತಸ್ಥ ಅಧಿಕಾರಿಗಳಿಗೆ ನಾವು ರಕ್ಷಣೆ ಕೊಟ್ಟ ಹಾಗೆ ಆಗುತ್ತದೆ. ಸಭಾನಾಯಕರು ದಯಮಾಡಿ ಸಮಾಲೋಚನೆ ಮಾಡಿ ಒಂದು ತೀರ್ಮಾನಕ್ಕೆ ಬರಬೇಕು. ಕೆಲವು ನಿಮಿಷಗಳ ಕಾಲ ಸಭೆಯನ್ನು ಮುಂದಕ್ಕೆ ಹಾಕಿ ತೀರ್ಮಾನಕ್ಕೆ ಬರುವುದು ಒಳ್ಳೆಯದು.

ಅಧ್ಯಕ್ಷರು.—ದಯಮಾಡಿ ಮಾನ್ಯ ಸದಸ್ಯರುಗಳವರು ತಮ್ಮ ಸೀಟಿಗೆ ಬಂದು ಕುಳಿತುಕೊಳ್ಳಬೇಕು.

ಶ್ರೀ ಎಸ್. ಬಂಗಾರಪ್ಪ.—ಸದನದ ಸದಸ್ಯರ ಘನತೆ ಗೌರವದ ಬಗ್ಗೆ ಏನು ಧೋರಣೆಯನ್ನು ತೆಗೆದುಕೊಂಡಿದ್ದೀರಿ ?

ಅಧ್ಯಕ್ಷರು.—ಮೊದಲು ತಾವುಗಳು ತಮ್ಮ ಜಾಗಕ್ಕೆ ಬಂದು ಕುಳಿತುಕೊಳ್ಳಬೇಕು. ಆಮೇಲೆ ಸಮಸ್ಯೆಯನ್ನು ಸರಿ ಮಾಡಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

(ಗೊಂದಲ)

ಶ್ರೀ ಆರ್. ವೆಂಕಟರಾವಯ್ಯ.—ಮಾನ್ಯ ಸಭಾನಾಯಕರು ಸುಮ್ಮನೆ ಕುಳಿತುಕೊಂಡಿದ್ದಾರೆ. ದಯವಿಟ್ಟು ಅವರು ಈ ಬಗ್ಗೆ ಮಾತನಾಡಬೇಕು. ಹಾಗೆಯೇ ಮಾನ್ಯ ದೇವೇಗೌಡರವರಲ್ಲಿಯೂ ವಿನಂತಿ ಮಾಡಿಕೊಳ್ಳುತ್ತೇನೆ. ಈ ಸಮಸ್ಯೆ ಏನಿದೆ ಇದನ್ನು ಬಗೆಹರಿಸಬೇಕು. ಮಾನ್ಯ ಅಧ್ಯಕ್ಷರೇ ಜನತಾ ಪಕ್ಷದ ಶಾಸಕರಿಗೂ ಈಗ ಅವಮಾನವಾಗಿದೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಈ ಒಂದು ಪ್ರಶ್ನೆ ಬಹಳ ವಿಚಿತ್ರವಾಗಿದೆ. ನಮ್ಮ ಸದನದ ನಾಯಕರು ಏಕೋ ಮೌನವಾಗಿ ಕುಳಿತಿದ್ದಾರೆ. ಇದರಿಂದ ಅಷ್ಟು